# ಓ ಗಂಡಸರೇ ನೀವೆಷ್ಟು ಅದೃಷ್ಟವಂತರು!



ಹೆಣ್ಣು–ಗಂಡಿನ ಬದುಕಿನಲ್ಲಿ ಎದುರಾಗುವ ಸ್ಥಿತ್ಯಂತರಗಳನ್ನು ಉದಾಹರಿಸುತ್ತ, ಎಲ್ಲ ಸಂದರ್ಭಗಳಲ್ಲೂ ಹೆಣ್ಣಿಗಿಂತಲೂ ಗಂಡು ಉತ್ತಮ ಸ್ಥಿತಿಯಲ್ಲಿರುವುದನ್ನು ಈ ಬರಹ ಬೆಟ್ಟುಮಾಡುತ್ತದೆ. 'ಓ ಗಂಡಸೇ ನೀನೆಷ್ಟು ಅದೃಷ್ಟವಂತ' ಎನ್ನುವ ಉದ್ಗಾರದಲ್ಲಿನ ವಿಷಾದ, ಲಿಂಗ ತಾರತಮ್ಯದ ಆಚರಣೆಯನ್ನೂ ಸಮಾಜದ ಧೋರಣೆಗಳಲ್ಲಿ ಆಗಬೇಕಾದ ಬದಲಾವಣೆಗಳನ್ನೂ ಸೂಚ್ಯವಾಗಿ ಹೇಳುತ್ತದೆ.

■ ಧಾರಿಣಿ ಮಾಯಾ

ಯಾವುದೇ ಕ್ಷೇತ್ರಕ್ಕೆ ಕಾಲಿಟ್ಟರೂ ಈಗ ಗಂಡು–ಹೆಣ್ಣೆಂಬ ಭೇದ ಭಾವ ಇಲ್ಲ. ಹೆಣ್ಣುಮಕ್ಕಳು ಸಾಧನೆಯ ಪಥವೇರಿ, ಗಂಡಿಗಿಂತ ಮುಂಚೂಣಿಯಲ್ಲಿದ್ದಾರೆ ಎಂದರೆ ಅತಿಶಯೋಕ್ತಿಯೇನಲ್ಲ. ಆದರೂ ನಮ್ಮ ಸಮಾಜದ ಕೆಲ ವರ್ಗದ ಜನ ಗಂಡು ಮಕ್ಕಳಿಗಾಗಿಯೇ ಇಂದೂ ಹಲುಬುತ್ತಾರೆ. ಇಂಥ ಮನೆಗಳಲ್ಲಿ ಮನೆಯ ವಾರಸುದಾರನಾಗಿ ಬೆಳೆಯುವ ಗಂಡು ಮಗು ಎಷ್ಟು ಅದೃಷ್ಟವಂತನಲ್ಲವೇ!

ಆಸ್ಪತ್ರೆಯಲ್ಲಿ ಮಗು ಹುಟ್ಟಿದ ತಕ್ಷಣ, ಎಲ್ಲರೂ ಕೇಳುವ ಮೊದಲ ಪ್ರಶ್ನೆ – 'ಮಗು ಗಂಡೋ, ಹೆಣ್ಣೋ?'

ಗಂಡು ಮಗು ಎಂದಾದಲ್ಲಿ ಮೊದಲು ಸಂಭ್ರಮಪಡುವುದು ಮಗುವಿನ ಅಜ್ಜ, ಅಜ್ಜಿ. ತಮ್ಮ ಮನೆಗೆ ವಾರಸುದಾರ ಬಂದ ಎಂಬ ಹೆಮ್ಮೆ ಅವರಿಗೆ. ಆ ಮಗುವಿಗೆ ವಿಶೇಷ ಕಾಳಜಿ. ಗಂಡು ಮಗು ಹುಟ್ಟಿದೆ ಎಂದಾಕ್ಷಣ ಎಲ್ಲರ ಮುಖದಲ್ಲಿ ಮಂದಹಾಸ, ಮನಸ್ಸಿಗೆ ಎಲ್ಲಿಲ್ಲದ ನೆಮ್ಮದಿ. ಓ ಗಂಡು ಕೂಸೇ, ನೀನೆಷ್ಟು ಅದೃಷ್ಟವಂತನಪ್ಪ!

ಮಗುವೇ, ನೀನು ಬೇಸರಗೊಂಡು ಅತ್ತಾಗ, ನಿನ್ನಮ್ಮ ಮತ್ತೆಲ್ಲರೂ, 'ನೀನು ಗಂಡು ಮಗು, ಬಹಳ **strong**, ಹೆಣ್ಣುಮಕ್ಕಳಂತೆ ಅಳಬೇಡ' ಎಂದು ನಿನ್ನ ಕಣ್ಣೀರು ಒರೆಸುವರು. ಆಗಿನಿಂದಲೇ ಶುರುವಾಗುವುದು – ನಾನು ಗಂಡು, ಹೆಣ್ಣಿಗಿಂತ ಮೇಲು, ದೈಹಿಕವಾಗಿ, ಮಾನಸಿಕವಾಗಿ ನಾನೇ ಬಲಾಢ್ಯ ಎಂಬ ಮನೋಭಾವ.

ಮನೆಯಲ್ಲಿ ಹೆಚ್ಚಿನ ಸವಲತ್ತುಗಳು ನಿನ್ನ ಪಾಲಾಗುತ್ತವೆ. ನಿನ್ನ ಪುಟ್ಟ ತಂಗಿ ದುರ್ಬಲೆ ಎಂದು ಅವಳನ್ನು ಕಡೆಗಾಣಿಸುತ್ತಿ, ಕೆಲವೊಮ್ಮೆ ನಿಕೃಷ್ಟವಾಗಿ ಕಾಣುತ್ತೀಯ. ಅವಳೊಡನೆ ಏನೇ ಹಂಚಿಕೊಂಡು ತಿನ್ನುವಾಗಲೂ ನಿನಗೇ ಹೆಚ್ಚಿನ ಪಾಲು. ಅವಳೊಡನೆ ಜಗಳವಾಡುವಾಗ ನಿನ್ನ ಬಲಪ್ರದರ್ಶನ ತೋರಿಸುವೆ.

ಪ್ರಾಯ ಬಂದಾಗ ಮೀಸೆ ಚಿಗುರಿ, ಗಡ್ಡ ಮೂಡುವುದು. ಆದರೂ ಇದ್ಯಾವುದೂ ನಿನ್ನ ನಿತ್ಯ ಕರ್ಮಗಳಲ್ಲಿ ಅಡ್ಡ ಬರುವುದಿಲ್ಲ. ನೀನು ನೀನಾಗಿಯೇ ಇದ್ದು ಜೀವನದ ಸುಖ ಸಂತೋಷವನ್ನು ಅನುಭವಿಸುವೆ. ಆದರೆ ನಿನ್ನ ತಂಗಿ ಪ್ರಾಯಕ್ಕೆ ಬಂದಾಗ ಅವಳಲ್ಲಾಗುವ ದೈಹಿಕ ಬದಲಾವಣೆಗಳಿಂದ ಅವಳು ಕಂಗೆಡುವಂತಾಗುತ್ತದೆ. ಋತುಸ್ರಾವದ ಸಮಯದಲ್ಲಿ ಹಲವಾರು ಸಂದರ್ಭಗಳಲ್ಲಿ ಆಕೆ ಮುಜುಗರದ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ದೈಹಿಕ–ಮಾನಸಿಕ ವ್ಯತಿರಿಕ್ತವನ್ನು ಅನುಭವಿಸುತ್ತಾಳೆ. ಅವಳ ಸುತ್ತ ಅಮ್ಮ ಬೇಲಿ ಹಾಕುತ್ತಾಳೆ. ತುಂಡು ಲಂಗ ಹೋಗಿ, ಮೈತುಂಬಾ ಬಟ್ಟೆ ಮುಚ್ಚಬೇಕೆಂಬ ತಾಕೀತು